ಸಾಕ್ಷಿ ಯನ್ನು ದಿಃ 12.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಮ್ಮ ಸಂಸ್ಥೆ 2017 ರಲ್ಲಿ ಸ್ಥಾಪನೆಯಾಗಿದೆ. ನಾನು ಹಾಗೂ ಸುಚಿತ್ರಾ ಅದರ ಸಂಸ್ಥಾಪಕರು.
2. ನಮ್ಮ ಸಂಸ್ಥೆಯಲ್ಲಿ ಈಗ ಇಬ್ಬರು ಕೆಲಸ ಮಾಡುತ್ತಿದ್ದಾರೆ. ಅದು ನೊಂದಣಿಯಾಗಿರುವ ಬಗ್ಗೆ ಹಾಗೂ ಪರವಾನಿಗೆಯನ್ನು ಹಾಜರು ಮಾಡಿದ್ದೀರಾ ಎಂದರೆ, ಮಾಡಿದ್ದೇನೆ. ಆ ರೀತಿ ನೀವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ, ಈ ಪ್ರಕರಣದಲ್ಲಿ ಕೊಟ್ಟಿಲ್ಲ.
3. ಯಾವುದೇ ಚಿಟ್ ಫಂಡ್ ನಡೆಸಬೇಕಾದರೆ ವರ್ಷಕ್ಕೆ ಇಂತಿಷ್ಟು ನಡೆಸಬೇಕು ಎಂದು ನಿಭಂದನೆ ಇವೆ ಎಂದರೆ, ಸರಿಯಲ್ಲ. ನೀವು ಚೀಟಿ ನಡೆಸಬೇಕಾದರೆ ಪ್ರತಿ ಚೀಟಿಗೂ ಪ್ರತ್ಯೇಕ ನೊಂದಣಿ ಮಾಡಬೇಕು ಎಂದರೆ ಸರಿ.
4. ಆರೋಪಿಯ ಚೀಟಿ ನಂ.ಎ 01/08. ಸರ್ಕಾರದಲ್ಲಿ ನೊಂದಣಿಯಾಗಿರುವ ನಂಬರ್ ನೆನಪಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ.
5. ನಿಮ್ಮ ಕಂಪನಿಯಲ್ಲಿ ಚೀಟಿ ವ್ಯವಹಾರ ಬಿಟ್ಟು ಲೇವಾದೇವಿ ವ್ಯವಹಾರ ಮಾಡುತ್ತೀರಾ ಎಂದರೆ, ಇಲ್ಲ.
6. ನಿಮ್ಮ ಸಂಸ್ಥೆಯಲ್ಲಿ ಈ ಪ್ರಕರಣ ನಡೆಸಲು ಜಿಪಿಎ ಪಡೆದುಕೊಂಡಿದ್ದೀರಾ ಎಂದರೆ, ನಾವು ಆಂತರಿಕವಾಗಿ ಮಾಡಿಕೊಂಡಿದ್ದೇವೆ.
7. ನೀವು ಅಧ್ಯಕ್ಷರು ಎಂಬ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ, ಮಾಡಿಲ್ಲ. ಹಾಜರು ಮಾಡಲು ತೊಂದರೆ ಇಲ್ಲ.
8. ಒಂದು ಚೀಟಿಗೆ 20 ಜನ ಸದಸ್ಯರು ಇರುತ್ತಾರೆ. ಪ್ರತಿ ಸದಸ್ಯರಿಗೆ ಸಂಬಂಧಪಟ್ಟ ದಾಖಲಾತಿ ನೀವು ನಿರ್ವಹಿಸುತ್ತೀರಾ ಎಂದರೆ ಸರಿ. ಆರೋಪಿಯ ಚೀಟಿ ಹಾಕಿರುವ ಲೆಡ್ಜರ್ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ, ಇಲ್ಲ.
9. ಈ ಚೀಟಿ ಯಾವ ದಿನಾಂಕದಂದು ಬಿಡ್ ಆಗುತ್ತಿತ್ತು ಎಂದರೆ, 20 ನೇ ತಾರೀಖು ಆಗುತ್ತದೆ, ರಜೆ ಇದ್ದರೆ ಬದಲಾವಣೆ ಆಗುತ್ತಿತ್ತು. ಚೀಟಿ ನಡೆಯುವ ಬಗ್ಗೆ ಸದಸ್ಯರಿಗೆ ನೊಟೀಸು ನೀಡುತ್ತಿದ್ದೀರಾ ಎಂದರೆ, ಮೊಬೈಲ್ ಮೂಲಕ ತಿಳಿಸುತ್ತಿದ್ದೆವು ಅಥವಾ ವಾಟ್ಸಪ್ ಗ್ರುಪ್ ಮೂಲಕ ತಿಳಿಸುತ್ತಿದ್ದೆವು. ಆ ಬಗ್ಗೆ ದಾಖಲಾತಿ ಹಾಜರುಪಡಿಸಲು ತೊಂದರೆ ಇಲ್ಲ.
10. ಯಾವುದೇ ಬಿಡ್ ಆಗುವ ಸಮಯದಲ್ಲಿ 20 ಜನ ಸದಸ್ಯರೂ ಕೂಡ ಹಾಜರಿರಬೇಕು ಎಂದರೆ, ಸರಿಯಲ್ಲ.
11. ಚೀಟಿ ಹಣ ಸಂದಾಯವಾಗಿರುವ ಬಗ್ಗೆ ಪ್ರತಿಯೊಬ್ಬರಿಗೂ ರಶೀದಿ ನೀಡುತ್ತೇವೆ.

12. ಕೆಲವು ಸಲ ನಿಮ್ಮ ವೈಯಕ್ತಿ ಖಾತೆಗಳಿಗೆ ಹಣ ಹಾಕಿಸಿಕೊಳ್ಳುತ್ತೀರಾ ಎಂದರೆ, ಇಲ್ಲ, ಸಂಸ್ಥೆಯ ಖಾತೆ ಮಾತ್ರ ಹಾಕಿಸಿಕೊಳ್ಳುತ್ತೇವೆ, ತೀರಾ ಅಗತ್ಯವಿದ್ದಾಗ ನಮ್ಮ ಖಾತೆಗೆ ಹಾಕಿದ್ದಕ್ಕೆ ರಶೀದಿ ಸಹ ಕೊಟ್ಟಿರುತ್ತೇವೆ.
13. ನಮ್ಮ ಸಂಸ್ಥೆಯ ಖಾತೆ ನವನಗರ ಕೊ-ಆಪ್ ಬ್ಯಾಂಕಿನಲ್ಲಿ ಇದೆ. ಹಣ ಹಾಕಿದ ಬಗ್ಗೆ ಪ್ರತ್ಯೇಕ ಲೆಡ್ಜರ್ ಇರುತ್ತದೆ ಎಂದರೆ ಸರಿ.
14. ಆರೋಪಿ ಹಾಕಿದ ಚೀಟಿ ಡಿವಿಡೆಂಟ್ ಚೀಟಿ ಎಂದರೆ ಸರಿ. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.
15. ನಾವು ಚೀಟಿ ಹಾಕಿಸಿಕೊಳ್ಳಲು ಆಧಾರ್ ಕಾರ್ಡ್ ಹಾಗೂ ಫೋಟೋಗಳನ್ನು ಪಡೆದುಕೊಳ್ಳುತ್ತೇವೆ, ಯಾವುದೇ ಚೆಕ್ ಪಡೆಯುವುದಿಲ್ಲ.
16. ಚೀಟಿ ಕೂಗಿದ ನಂತರ ಪ್ರೊನೋಟ್ ಪಡೆಯುತ್ತೇವೆ. ಚೆಕ್ ಪಡೆದುಕೊಳ್ಳುವುದಿಲ್ಲ.
17. ನಿಪಿ - 1 ರ ಚೆಕ್ಕನ್ನು ಚೀಟಿ ವಿಚಾರಕ್ಕೆ ಸಂಬಂಧಪಟ್ಟಂತೆ ಚೆಕ್ ಕೇಸ್ ಹಾಕಿದ್ದೀರಾ ಎಂದರೆ ಸರಿ.
18. ನಿಪಿ -1 ರ ಚೆಕ್ಕಿಗೂ ಹಾಗೂ ಚೀಟಿ ವ್ಯವಹಾರಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಅವರು ಬ್ಯಾಲನ್ಸ್ ಕೊಡುವ ಸಲುವಾಗಿ ಚೆಕ್ ನೀಡಿದ್ದರು. ಆರೋಪಿ ಅಕೌಂಟ್ ಪೇಯಿ ಚೆಕ್ ನೀಡಿದ್ದರು.
19. 20 ಜನ ಸದಸ್ಯರ ಬಳಿಯೂ ಚೆಕ್ ಪಡೆದಿದ್ದೀರಾ ಎಂದರೆ, ಇಲ್ಲ ಬ್ಯಾಲನ್ಸ್ ಪೇಮೆಂಟ್ ಕೊಡಬೇಕಾಗಿದ್ದರೆ ಪಡೆಯುತ್ತೇವೆ.
20. ಚೀಟಿ ತೆರೆಯಬೇಕಾದರೆ ಪಾಸ್ ಬುಕ್ ತೆರೆಯುತ್ತೀರಾ ಎಂದರೆ ಸರಿ. ಆರೋಪಿಯ ಪಾಸ್ ಪುಸ್ತಕದಲ್ಲಿ ಅದನ್ನು ನಮೂದು ಮಾಡುತ್ತೀರಾ ಎಂದರೆ ಸರಿ. ಸಾಕ್ಷಿಗೆ ಒಂದು ಚೀಟಿ ಬುಕ್ ತೋರಿಸಿದ್ದು, ಅದೇ ಬುಕ್ ಎಂದರೆ ಸರಿ. ಅದರಲ್ಲಿ ಸಿಬ್ಬಂದಿಯ ಸಹಿ ಇದೆ. ***ಸದರಿ ಪುಸ್ತಕವನ್ನು ನಿಡಿ - 1 ಎಂದು ಗುರುತಿಸಲಾಯಿತು.***
21. ನಿಡಿ - 1 ನ್ನು ನವೆಂಬರ್ ಅಥವಾ ಡಿಸೆಂಬರ್ 2018 ರಲ್ಲಿ ಆಗಿದೆ. ಅದರಲ್ಲಿ 9 ಚೀಟಿ ಮಾಡಿದ್ದೀರಾ ಎಂದರೆ ಸರಿ. ದಿಃ 18.04.2020 ರಲ್ಲಿ ನಾವು ಕೊನೆಯದಾಗಿ ಚೀಟಿ ಕಟ್ಟಿರುವ ರಶೀದಿ ಇದೆ ಎಂದರೆ, ಸರಿ. ಅದರ ಹಿಂದೆ ಇರುವ ಎಲ್ಲಾ ಚೀಟಿಗಳ ಮೊತ್ತ ಎಲ್ಲಾ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ***12 ರಶೀದಿಗಳನ್ನು ನಿಡಿ - 2 ರಿಂದ 13 ಎಂದು ಗುರುತಿಸಲಾಯಿತು.***
22. ಚೀಟಿ ಕಟ್ಟಿಸಿಕೊಳ್ಳಬೇಕದಾರೆ ಬ್ಯಾಲನ್ಸ್ ಇರುವದನ್ನು ಮೊದಲು ಕಟ್ಟಿಸಿಕೊಳ್ಳುತ್ತಾರೆ ಎಂದರೆ, ಸರಿಯಲ್ಲ.
23. ಇಲ್ಲಿಯವರೆಗೆ ಆರೋಪಿ 1 ಲಕ್ಷ 53 ಸಾವಿರ ಚಿಲ್ಲರೆ ಕಟ್ಟಿರುವ ರಶೀದಿಗಳು ಇವೆ ಎಂದರೆ, ಸರಿ.

24. ಆರೋಪಿಯು ನಿಮ್ಮ ಸಂಸ್ಥೆಗೆ ಬಂದು ಹಣ ಕಟ್ಟಿದ್ದು ನಮೂದು ಮಾಡಿಕೊಳ್ಳಲು ಹೇಳಿದಾಗ ನಿರಾಕರಿಸಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿ ಇದುವರೆಗೆ ಕಟ್ಟಿರುವ ಹಣದ ದಾಖಲೆ ಕೇಳಿದರೂ ನೀವು ಕೊಟ್ಟಿಲ್ಲ ಎಂದರೆ ಸರಿಯಲ್ಲ, ಅವರು ಡಿಪಾಲ್ಟರ್ ಆಗಿದ್ದಾರೆ. ಆ ಬಗ್ಗೆ ನೀವು ಡಿಪಾಲ್ಟರ್ ನೊಟೀಸು ನೀಡಿದ್ದೀರಾ ಎಂದರೆ ನೀಡಿದ್ದೇವೆ. ಅದನ್ನು ಹಾಜರುಪಡಿಸಿಲ್ಲ, ಹಾಜರುಪಡಿಸಲು ತೊಂದರೆ ಇಲ್ಲ.

25. ನಿಮ್ಮ ಸಹಸಂಸ್ಥಾಪಕರಾದ ಸುಚಿತ್ರಾ ರವರ ಪತಿ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ.

26. ಆರೋಪಿಯು ನಿಮ್ಮ ಅಣ್ಣ ಸ್ವಾಮಿಗೌಡ ರವರ ನವನಗರ ಕೋ-ಆಪ್ ಬ್ಯಾಂಕ್ ಖಾತೆಗೆ 51 ಸಾವಿರ ಹಣವನ್ನು ವರ್ಗಾವಣೆ ಮಾಡಿದ್ದಾರೆ ಎಂದರೆ, ವ್ಯವಹಾರದಲ್ಲಿ ನಮಗೆ ಹಾಗೂ ಅವರಿಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹಣ ಈ ಚೀಟಿ ವ್ಯವಹಾರದ ಬಾಕಿಯ ಸಲುವಾಗಿ ಆಗಿರುತ್ತದೆ ಎಂದರೆ ಸರಿಯಲ್ಲ.

27. ಚೀಟಿಯ ಉಳಿಕೆ ಬಾಕಿ ಹಣವನ್ನು ಸಹ ನಿಮ್ಮ ಸಂಸ್ಥೆಗೆ ಬಂದು ನಗದು ಮೂಲಕ ಕಟ್ಟಿದ್ದಾರೆ ಎಂದರೆ ಸರಿಯಲ್ಲ.

28. ಆರೋಪಿಗೆ ನೀವು ಯಾವುದೇ ನೊಟೀಸು ನೀಡಿಲ್ಲ ಎಂದರೆ ಸರಿಯಲ್ಲ.

29. ನೀವು ಕೊನೆಯದಾಗಿ ಆರೋಪಿಯ ಪತ್ನಿಗೆ ಒಂದು ಜ್ಞಾಪಣ ಕಳಿಸಿದ್ದು, ಅದರಲ್ಲಿ ಕೊನೆಯದಾಗಿ 11 ಸಾವಿರ ಚಿಲ್ಲರೆ ಹಣ ಮಾತ್ರ ಬಾಕಿ ಇದೆ ಎಂದು ಕಳುಹಿಸಿದ್ದೀರಾ ಎಂದರೆ, ನೊಟೀಸು ಕಳುಹಿಸಿದ್ದೇವೆ, ಆದರೆ 11 ಸಾವಿರ ಮಾತ್ರ ಬಾಕಿ ಇದೆ ಎಂದು ಕಳುಹಿಸಿಲ್ಲ. ***ಒಂದು ನೊಟೀಸನ್ನು ನಿಡಿ - 14 ಎಂದು ಗುರುತಿಸಲಾಯಿತು.***

30. ಸದರಿ ನೊಟೀಸು ಬಂದ ನಂತರ ಆರೋಪಿ ಪೂರ್ತಿ ಬಾಕಿ ಹಣವನ್ನು ನಿಮ್ಮ ಸಂಸ್ಥೆಗೆ ಜಮಾ ಮಾಡಿದ್ದಾರೆ ಎಂದರೆ ಸರಿಯಲ್ಲ.

31. ಸದರಿ ಹಣವನ್ನು ಕಟ್ಟಿದ್ದರೂ ಆರೋಪಿ ನಿಮ್ಮ ಸಂಸ್ಥೆಯಲ್ಲಿ ಮಾತಿನ ಚಕಮಕಿ ಮಾಡಿದ್ದರಿಂದ ನೀವು ಈ ಸುಳ್ಳು ಪ್ರಕರಣ ಹಾಕಿದ್ದೀರಾ ಎಂದರೆ ಸರಿಯಲ್ಲ.

32. ಆರೋಪಿ ನಿಮ್ಮ ಸಂಸ್ಥೆಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

33. ಆರೋಪಿ ನಿಮ್ಮ ಸಂಸ್ಥಗೆ ಬಂದಾಗ ಅವರಿಗೆ ಗೊತ್ತಿಲ್ಲದಂತೆ ಅವರ ಬ್ಯಾಗಿನಲ್ಲಿ ಇದ್ದ ಚೆಕ್ಕನ್ನು ಕದ್ದು, ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಸರಿಯಲ್ಲ.

34. ಚೆಕ್ ಬೌನ್ಸ್ ಆದ ನಂತರ ನೊಟೀಸು ನೀಡಿದ ದಿನಾಂಕ ನೆನಪಿಲ್ಲ. 15 ದಿನ ಆದ ನಂತರ ಕೊಟ್ಟಿದ್ದೆವು. ಸದರಿ ನೊಟೀಸಿನಲ್ಲಿ ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿ.

35. ನಿಪಿ - 1 ರ ಮೇಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

36. ನಿಪಿ - 1(ಎ)ರ ಸಹಿ ಹಾಗೂ ಅಂಚೆ ಸ್ವೀಕೃತಿಯಲ್ಲಿರುವ ಸಹಿಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.
37. ನಿಪಿ-1 ರಲ್ಲಿ ಬ್ಲೂ ಇಂಕ್ ನಲ್ಲಿ ಸಹಿ ಮಾಡಿದ್ದಾರೆ. ಚೆಕ್ ನಂ.622529.
38. ನಿಮ್ಮ ಸಂಸ್ಥೆ ಮೂಲಕ ಈ ಚೀಟಿ ಮುಕ್ತಾಯವಾದ ನಂತರವೂ ಸಹ ಪ್ರಕರಣಗಳನ್ನು ದಾಖಲು ಮಾಡಿದ್ದೀರಾ ಎಂದರೆ ಸರಿಯಲ್ಲ.
39. ಚೆಕ್ ಪ್ರಕರಣಗಳಲ್ಲಿ ರಾಜಿ ಮಾಡಿಕೊಂಡ ನಂತರ ಸಹ ಹಲವಾರು ಪ್ರಕರಣಗಳಲ್ಲಿ ಬೇರೆ ಪ್ರಕರಣ ಹಾಕಿದ್ದೀರಾ ಎಂದರೆ, ಬಾಕಿ ಇದ್ದರೆ ಹಾಕುತ್ತೇವೆ ಎಂದು ನುಡಿಯುತ್ತಾರೆ.
40. ಈಗ ನಾವು ಚೀಟಿ ನಡೆಸುತ್ತಿಲ್ಲ ಆದರೆ ಬಾಕಿ ಇದ್ದದನ್ನು ನಡೆಸುತ್ತಿದ್ದೇವೆ.
41. ನಿಮ್ಮ ಚೀಟಿ ನಡೆಸುವ ವರ್ತನೆಯಿಂದ ಸಾರ್ವಜನಿಕರು ಬೇಸತ್ತು ನಿಮ್ಮ ಚೀಟಿ ವ್ಯವಹಾರ ಮುಕ್ತಾಯ ಮಾಡುವ ಹಂತಕ್ಕೆ ಬಂದಿದೆ ಎಂದರೆ ಸರಿಯಲ್ಲ. ಆ ದ್ವೇಷದಿಂದ ಈ ಹಲವಾರು ಸುಳ್ಳು ಪ್ರಕರಣಗಳನ್ನು ನ್ಯಾಯಾಯದ ಮುಂದೆ ತಂದಿದ್ದೀರಾ ಎಂದರೆ ಸರಿಯಲ್ಲ.
42. ಆರೋಪಿತರಿಂದ ಹೆಚ್ಚುವರಿ ಹಣ ವಸೂಲಿ ಮಾಡಲು ಸುಳ್ಳು ಪ್ರಕರಣ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ